ಕಛೇರಿ : +91 80 2287 4039
+91 80 2235 4085
ಫ್ಯಾಕ್ಸ್ : +9180 2228 5591
ಇ-ಮೇಲ್ : com-hfws@karnataka.gov.in

# ಆಯುಕ್ತಾಲಯ

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ಸಂಖ್ಯೆ: DD/SSU/COVID-19 Guidelines & SoPs/42/2020-21 ದಿನಾಂಕ: 29.09.2020

**ಸುತ್ತೋಲೆ**

**ವಿಷಯ:** ವ್ಯಕ್ತಿಗಳಿಗೆ ಸೋಂಕು ನಿವಾರಕ ದ್ರಾವಣ ಸಿಂಪಡಣೆ ಮಾಡುವುದನ್ನು ನಿಷೇಧಿಸಿರುವ ಕುರಿತು.

**ಉಲ್ಲೇಖ:**
1. ಕೋವಿಡ್ 19 ನಿರ್ವಹಣೆಯಲ್ಲಿ ವ್ಯಕ್ತಿಗಳಿಗೆ ಸೋಂಕು ನಿವಾರಕ ದ್ರಾವಣ ಸಿಂಪಡಣೆಯ ನಿಷೇಧ ಕುರಿತಂತೆ , ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯ-ಭಾರತ ಸರ್ಕಾರ,ಇವರ ಸಲಹೆಗಳು, ದಿನಾಂಕ: 18.4.2020.
2. ಕೋವಿಡ್ 19, ರಾಜ್ಯ ಮಟ್ಟದ ತಾಂತ್ರಿಕ ಸಲಹಾ ಸಮಿತಿ, 25 ನೇ ಸಭೆಯ ನಡಾವಳಿ, ದಿನಾಂಕ: 03.08.2020.
3. ಗುರ್‌ಸಿಮ್ರನ್ ಸಿಂಗ್ ನರೂಲಾ,ಯೂನಿಯನ್ ಆಫ್ ಇಂಡಿಯಾ, ವಿಜ್ಞಾನ & ತಂತ್ರಜ್ಞಾನ ಮಂತ್ರಾಲಯ ಹಾಗೂ ಇತರರು, ಇವರ ರಿಟ್ ಪಿಟಿಶನ್ (ಸಿವಿಲ್) ಸಂಖ್ಯೆ: 560/2020, ಇದನ್ನು ಕಾರ್ಯಗತಗೊಳಿಸುವ ನಿಟ್ಟಿನಲ್ಲಿ, ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯ-ಭಾರತ ಸರ್ಕಾರ,ಇವರಿಂದ ಹೊರಡಿಸಲಾದ ಅಧಿಕೃತ ಜ್ಞಾಪನಾ ಪತ್ರ, ದಿನಾಂಕ:23.9.2020. ರ ಅನ್ವಯ.

*****

ಸಾಂಕ್ರಾಮಿಕ ರೋಗಗಳನ್ನು ಹರಡುವ ಅಪಾಯಕಾರಿ ಸೂಕ್ಷ್ಮಾಣು ಜೀವಿಗಳನ್ನು ನಾಶಪಡಿಸಲು ಸೋಂಕು ನಿವಾರಕಗಳ ಬಳಕೆ ಚಾಲ್ತಿಯಲ್ಲಿದೆ. ಸೋಂಕು ನಿವಾರಕಗಳ ತೀಕ್ಷ್ಣ ರಾಸಾಯನಿಕ ಗುಣಲಕ್ಷಣಗಳ ಆಧಾರದ ಮೇಲೆ, ಇವುಗಳನ್ನು ನಿರ್ಜೀವ ವಸ್ತುಗಳ ಮೇಲೆ ಸಿಂಪಡಿಸಲಾಗುತ್ತದೆ. ಸೋಂಕು ನಿವಾರಕ ರಾಸಾಯನಿಕಗಳು ದೈಹಿಕವಾಗಿ ಹಾಗೂ ಮಾನಸಿಕವಾಗಿ ಹಾನಿಕಾರಕವಾಗಿದ್ದು, ಕಣ್ಣು / ಚರ್ಮದಲ್ಲಿ ಉರಿಯುಂಟಾಗುವುದು,ಉಸಿರಾಟದ ತೊಂದರೆ ಹಾಗೂ ವಾಕರಿಕೆ , ವಾಂತಿಯಂಥಹ ಪರಿಣಾಮಗಳನ್ನು ಉಂಟುಮಾಡುವ ಸಾಮರ್ಥ್ಯವನ್ನು ಹೊಂದಿವೆ. ಆದ್ದರಿಂದ, ಯಾವುದೇ ವಿಧಾನದ ಮೂಲಕ ಎಂತಹ ಪರಿಸ್ಥಿತಿಯಲ್ಲಿಯೂ ಸಹ ವ್ಯಕ್ತಿಗಳಿಗೆ ಅಥವಾ ವ್ಯಕ್ತಿಗಳ ಸಮೂಹ /ಗುಂಪುಗಳಿಗೆ ಸೋಂಕು ನಿವಾರಕದ ಸಿಂಪಡಣೆ ಮಾಡುವುದನ್ನು ಶಿಫಾರಸ್ಸು ಮಾಡಲಾಗುವುದಿಲ್ಲ.

ಈ ಹಿನ್ನೆಲೆಯಲ್ಲಿ, ಯಾವುದೇ ವಿಧಾನವನ್ನು ಬಳಸಿ, ವ್ಯಕ್ತಿಗಳಿಗೆ ಸೋಂಕು ನಿವಾರಕ ರಾಸಾಯನಿಕಗಳ ಸಿಂಪಡಣೆಯನ್ನು ಶಿಫಾರಸ್ಸು ಮಾಡುವುದಿಲ್ಲವೆಂದು ಪುನರುಚ್ಛರಿಸುತ್ತಾ, ಇಂತಹ ಪದ್ಧತಿಯು ಅನುಷ್ಠಾನಗೊಳ್ಳದಂತೆ ಖಚಿತ ಪಡಿಸಿಕೊಳ್ಳಲು ಎಲ್ಲಾ ಜಿಲ್ಲಾಡಳಿತಗಳಿಗೆ ನಿರ್ದೇಶಿಸಿದೆ.

29.9

**ಆಯುಕ್ತರು**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು**

**ಪ್ರತಿಯನ್ನು,**

1. ಆಯುಕ್ತರು -ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.
2. ಜಿಲ್ಲಾಧಿಕಾರಿಗಳು – ಎಲ್ಲಾ ಜಿಲ್ಲೆಗಳು.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ – ಎಲ್ಲಾ ಜಿಲ್ಲೆಗಳು.



3ನೇ ಮಹಡಿ, ಐಪಿಪಿ ಕಟ್ಟಡ, ಆನಂದ್ ರಾವ್ ವೃತ್ತ, ಬೆಂಗಳೂರು - 560 009.

4. ನಿರ್ದೇಶಕರು – ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.
5. ನಿರ್ದೇಶಕರು – ವೈದ್ಯಕೀಯ ಶಿಕ್ಷಣ ಇಲಾಖೆ.
6. ಜಿಲ್ಲಾ ಆರೋಗ್ಯಾಧಿಕಾರಿಗಳು /ಜಿಲ್ಲಾ ಸರ್ಜನರು – ಎಲ್ಲಾ ಜಿಲ್ಲೆಗಳು.

**ಪ್ರತಿಯನ್ನು ಮಾಹಿತಿಗಾಗಿ ಸಲ್ಲಿಸಿದೆ.**

1. ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ.
2. ಮಾನ್ಯ ಮುಖ್ಯ ಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿಗಳು.
3. ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
4. ಮುಖ್ಯ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ.
5. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ.